**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# ಸಿ.ಸಿ.ನಂ.554/2017

| | | | |
|---|---|---|---|
| ಸಾಕ್ಷಿದಾರರ ಹೆಸರು | : | ದಿನೇಶ್ | ಸಿ.ಡಬ್ಲ್ಯೂ-05 |
| ತಂದೆಯ ಹೆಸರು | : | ಮಲ್ಲೇಶಪ್ಪ | ಪಿ.ಡಬ್ಲ್ಯೂ-04 |
| ವಯಸ್ಸು | : | 35 ವರ್ಷ | - |
| ಉದ್ಯೋಗ | : | AHC-47, ಸಾಲಿ ಗ್ರಾಮ ಪೋಲೀಸ್ ಠಾಣೆ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **17.08.2024.** |
| ವಾಸಸ್ಥಳ | : | ಸಾಲಿ ಗ್ರಾಮ. | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಬೀಚನಹಳ್ಳಿ ಪೊಲೀಸ್ ಠಾಣೆಯಲ್ಲಿ 2012 ಜೂನ್ ರಿಂದ 2018 ಜುಲೈರವೆಗೆ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ19.01.2017 ಸಂಜೆ 5.00 ಗಂಟೆಯ ಸಮಯದಲ್ಲಿ ನಾನು ಪೋಲೀಸ್ ಠಾಣೆಯಲ್ಲಿದ್ದಾಗ ಚಾಸಾ-1 ರವರು ನನ್ನನ್ನು ಮತ್ತು ಚಾಸಾ-4 ರವರನ್ನು ಕರೆದು, ನನಗೆ ಯಾರೋ ಬಾತ್ಮಿದಾರರು ಪೋನ್ ಕರೆ ಮಾಡಿ ಬೋರೆದೇವನಮುಂಟಿ ಗ್ರಾಮದ ವೆಂಕಟರಾಜು ಬಿನ್ ಗೋಪಾಲಯ್ಯ ಅವರ ಮನೆಯ ಮುಂದೆ ಸಾರಾಯಿ ಪೌಚ್ ಗಳನ್ನು ಇಟ್ಟುಕೊಂಡು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುತ್ತಾರೆ ಎಂದು ಬಾತ್ಮಿ ಬಂದಿರುತ್ತದೆ ಎಂದು ನಮಗೆ ಹೇಳಿ, ಚಾಸಾ-14 ರವರು ಸ್ವ ವರದಿಯನ್ನು ತಯಾರಿಸಿ ಠಾಣೆ SHO ರವರಿಗೆ ನೀಡಿ, ಬೀಚನಹಳ್ಳಿ ಪೋಲೀಸ್ ಠಾಣೆ ಮೊಹರ ನಂಬರ್. 07/2017 ರಂತೆ ಕೇಸನ್ನು ಕಲಂ 34 K.E.Act ಅಡಿಯಲ್ಲಿ ಕೇಸನ್ನು ದಾಖಲು ಮಾಡಿರುತ್ತಾರೆ. ನಾನು ಚಾಸಾ -1 ಮತ್ತು 4 ರವರು ಸಂಜೆ 6.30 ಗಂಟೆಗೆ ಠಾಣೆಯಿಂದ ಹೊರಟು 7.00 ಗಂಟೆ ಸಮಯಕ್ಕೆ ಬೋರದೇವರಮುಂಟಿ ಗ್ರಾಮದ ಬಸ್ ನಿಲ್ದಾಣದ ಹಂತಿರ ಹೋಗಿ ಅಲ್ಲೇ ಇದ್ದ ವೇಣುಗೋಪಾಲ ಮತ್ತು ನಾಗರಾಜು ರವರಿಗೆ ವಿಷಯವನ್ನು ತಿಳಿಸಿ ಅವರು ಒಪ್ಪಿದ ಮೇರೆಗೆ ಈ ಕೇಸಿನಲ್ಲಿ ಪಂಚರುದಾರರಾಗಿ ಬರಮಾಡಿಕೊಂಡು ಬೋರದೇವರಮುಂಟಿ ಗ್ರಾಮದ ವೆಂಕಟರಾಜುರವರ ಮನೆ ಹತ್ತಿ ಹೋಗಿದ್ದು, ಸಮಯದಲ್ಲಿ ಸದರಿ

ವೆಂಕಟರಾಜು ಒಂದು ಚೀಲವನ್ನು ಹಿಡಿದುಕೊಂಡಿದ್ದು, ಆ ಚೀಲವನ್ನು ಪಂಚರುದಾರರ ಸಮಕ್ಷಮ ತೆರೆದು ನೋಡಲಾಗಿ ಅದರಲ್ಲಿ 90 ML .ನ 50 ವಿಂಡ್ಸ್ ಡಿಲಕ್ಸ್ ವಿಸ್ಕಿ ಯ ಸಾರಾಯಿ ಪೌಚ್ ಗಳು ಇರುವುದು ಕಂಡುಬಂದಿದ್ದು ಅವುಗಳ ಪೈಕಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು 30 ಸಾರಾಯಿ ತುಂಬಿದ ಪೌಚ್‌ಗಳು ಬಿಳಿ ಬಟ್ಟೆಯಿಂದ ಹೊಲೆದು N ಎಂಬ ENGLISH ಅಕ್ಷರದಿಂದ ಅರಗಿನ ಸೀಲ ಮಾಡಿರುತ್ತೇವೆ. ಮಧ್ಯ ಮಾರಾಟ ಮಾಡಿ ಬಂದ ರೂ.200 ಹಣವನ್ನು ಮತ್ತು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಪಂಚರದಾರರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇವೆ. ಸ್ಥಳದಲ್ಲೇ ಪಂಚರುದಾರರು ಸಹಿಗಳನ್ನು ಮಾಡಿಸಿರುತ್ತೇವೆ. ಮಹಜರ್ ನ್ನು ರಾತ್ರಿ 7.15 ರಿಂದ 8.15 ರವರೆಗೂ ವಿದ್ಯುತ್ ದೀಪದ ಸಹಾಯದಿಂದ ಮಹಜರ್ ಕ್ರಮ ಜರುಗಿಸಿರುತ್ತೇವೆ.

ಆರೋಪಿತನನ್ನು ವಶಪಡಿಸಿಕೊಂಡ ಮಾಲುಗಳ ಸಮೇತ ಆರೋಪಿಯನ್ನು ಠಾಣೆಗೆ ತಂದು SHO ಮುಂದೆ ಹಾಜರು ಪಡಿಸಿರುತ್ತೇವೆ. ಮಹಜರ್ ಮಾಡುವ ಕಾಲಕ್ಕೆ ಆರೋಪಿತನಿಂದ ಜಪ್ತು ಮಾಡಿಕೊಂಡು ರೂ.100 ಮುಖ ಬೆಲೆಯ ಎರಡು ನೊಟುಗಳನ್ನು ಜಪ್ತು ಮಾಡಿಕೊಂಡಿದ್ದು, ಸದರಿ ನೊಟುಗಳನ್ನು ಈಗಾಗಲೇ ಮು.ಮಾ. 32 ಎಂದು ಗುರುತಿಸಲಾಗಿದ್ದು ಸಾಕ್ಷಿಯು ಇದೇ ನೋಟುಗಳೆಂದು ಗುರುತಿಸಿರುತ್ತಾರೆ. ಮು.ಮಾ.1 ರಿಂದ 30 ಖಾಲಿ ಸಾರಾಯಿ ಪೌಚ್ ಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಪ್ಲಾಸ್ಟಿಕ್ ಚೀಲ/ಕವರ್ ನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ಮು.ಮಾ 31 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಘಟನಾ ಸಂಬಂಧ ನಾನು ತನಿಖಾಧಿಕಾರಿಯ ಮುಂದೆ ನನ್ನ ಹೇಳಿಕೆಯನ್ನು ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ . ಸಿ.ಜಿ.ಕೆ. ವಕೀಲರಿಂದಃ**

ಬೀಚನಹಳ್ಳಿ ಪೋಲೀಸ್ ಠಾಣೆ ಬೊರೇದೇವನಮುಂಟಿ ಗ್ರಾಮ 12 ರಿಂದ 15 ಕಿ.ವಿ. ಇರುತ್ತದೆ. ಪಂಚರುದಾರರಿಗೆ ಲಿಖಿತ ನೋಟಿಸ್ ಕೊಟ್ಟಿದ್ದಿರಾ ಎಂದರೆ ಮೌಖಿಕವಾಗಿ ಹೇಳಿ ಚಾಸಾ-2 ಮತ್ತು 3 ರವರುಗಳನ್ನು ಪಂಚರದಾರರಾಗಿ ಬರಮಾಡಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಮು.ಮಾ.31 ಪ್ಲಾಸ್ಟಿಕ ಕವರ್ ಎಂದರೆ ಸರಿ. ಮಾಲು ಪಟ್ಟಿಯಲ್ಲಿ ಬಿಳಿ ಪ್ಲಾಸ್ಟಿಕ್ ಚೀಲಯನ್ನು ನಮೂದು ಆಗಿರುತ್ತದೆ ಎಂದರೆ ಸರಿ. ನಮ್ಮ ಠಾಣೆಯಲ್ಲಿ ಇದೇ ಸಾರಾಯಿ ಪೌಚ್ ಗಳನ್ನು ಈ ಕೇಸಿಗೆ ಅಳವಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿಯು ತಮ್ಮ ಮನೆಯ ಯಾವುದೇ ಸಾರಾಯಿ ಪೌಚ್ ಗಳಸನ್ನು ಹಿಡಿದು ಕೊಂಡು ಮಾರಾಟ ಮಾಡುತಿರಲಿಲ್ಲ ಎಂದರೆ ಸರಿಯಲ್ಲ  ಚಾಸಾ-1 ರವರು ಠಾಣಾ ಅಧಿಕಾರಿಯವರು ತಮ್ಮ ಠಾಣೆಯ ಅಂಕಿ ಅಂಶಗಳನ್ನು  ತೋರಿಸಲು ಸುಳ್ಳು ಕೇಸಿನ್ನು ದಾಖಲಮಾಡಿದ್ದ ಅವರಿಗೆ ಅನುಸರಿಸಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೂ ಮುದ್ದೇ ಮಾಲುಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ -1 ಎಂದು ನುಡಿಯುತ್ತಾರೆ .ಚಾಸಾ-1 ರವರು ಮಹಜರ್ ನ್ನು ತಮ್ಮ ಹತ್ತಾಕ್ಷರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ  ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**